# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಳಂದೂರು.

## CC494/2026

ಪಿರ್ಯಾದಿ : ರಾಜ್ಯದ ಪರವಾಗಿ ಕುದೇರು ಪೊಲೀಸ್ ಠಾಣೆ

**ವಿರುದ್ಧ**

ಆರೋಪಿ : ಮಹದೇವಮ್ಮ ಬಿನ್ ಲೇಟ್ ಚಂದ್ರಮೋಹನ್, 46 ವರ್ಷ,
ಪರಿಶಿಷ್ಟ ಜನಾಂಗದ ಬೀದಿ, ಹೆಗ್ಗವಾಡಿ ಗ್ರಾಮ,
ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

**:ಆಪಾದನಾ ನೀಡಿಕೆ:**

ಶ್ರೀ ಸುಜಾತ ಹೆಚ್, ಎಲ್,ಎಲ್,ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಯಳಂದೂರು ಆದ ನಾನು ನಿನ್ನನ್ನು ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸುತ್ತೇನೆ.

ದಿನಾಂಕ: 09.04.2026 ರಂದು ರಾತ್ರಿಃ 7.40 ಗಂಟೆ ಸಮಯದಲ್ಲಿ ಕುದೇರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹೆಗ್ಗವಾಡಿ ಗ್ರಾಮದ ಪರಿಶಿಷ್ಟ ಜನಾಂಗ ಬೀದಿಯ ಚಂದ್ರಮೋಹನ್ ಮನೆಯ ಮುಂಭಾಗ ಹಾದಿರುವ ಸಾರ್ವಜನಿಕ ರಸ್ತೆಯಲ್ಲಿ, ಆರೋಪಿಯಾದ ನೀನು ಕಾನೂನು ಬಾಹಿರವಾಗಿ ಯಾವುದೇ ರಹದಾರಿಯಿಲ್ಲದೆ ಅಕ್ರಮವಾಗಿ 0.810 ಲೀಟರ್ ಪ್ರಮಾಣದ 90 ಎಂ.ಎಲ್ ಸಾಮರ್ಥ್ಯದ ಮದ್ಯ ತುಂಬಿದ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ ಒಟ್ಟು 09 ಟೆಟ್ರಾ ಪ್ಯಾಕ್‌ಗಳನ್ನು ಇಟ್ಟುಕೊಂಡು ಹೆಚ್ಚಿನ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಸಾರ್ವಜನಿಕರಿಗೆ ಸಾರ್ವಜನಿಕ ಸ್ಥಳದಲ್ಲಿ ಮಾರಾಟ ಮಾಡಿ ಸಾರ್ವಜನಿಕ ಸ್ಥಳದಲ್ಲೇ ಸಾರ್ವಜನಿಕವಾಗಿ ಮದ್ಯವನ್ನು ಕುಡಿಯಲು ಅನುವು ಮಾಡಿಕೊಟ್ಟಿರುವ ಈ ನಿಮ್ಮ ಕ್ರಮವು ಕರ್ನಾಟಕ ಅಬಕಾರಿ ಕಾಯಿದೆ ಕಲಂ. 15(ಎ) ಮತ್ತು 32(3) ರ ಅಡಿಯಲ್ಲಿ ಅಪರಾಧ ಎಸಗಿರುವುದಾಗಿ ಆರೋಪಿಸಲಾಗಿದೆ.

ಪ್ರಶ್ನೆ: 1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರ:

ಪ್ರಶ್ನೆ: 2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೆ?

ಉತ್ತರ:

ಮೇಲೆ ಪಡೆದ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನಗೆ ಸ್ವತಃ ಹೇಳುವ ಹಾಗೆ ಪಡೆಯಲಾಗಿದ್ದು ಆರೋಪಿಯು ನುಡಿದ ಪೂರ್ಣ ಹಾಗೂ ಸತ್ಯವಾದ ಹೇಳಿಕೆಯನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ದಿನಾಂಕಃ 18.07.2026.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಯಳಂದೂರು.